**ಅಸಲು ದಾವೆ ಸಂಖ್ಯೆಃ 124/20**

**ಪಿ.ಡಬ್ಲೂಃ 1**

**<u>ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕಃ</u> 15.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ **<u>ಪಾಟೀ ಸವಾಲುಃ</u>** ಪ್ರತಿವಾದಿ ಪರ ವಕೀಲರು **ಶ್ರೀ. SAA** ರವರಿಂದ.

ನಿಪಿ 10 ರ ದಾಖಲಾತಿಯಲ್ಲಿನ ಸ್ವತ್ತು 50 ಅಡಿ ಉದ್ದ 35 ಅಡಿ ಅಗಲ ಇರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ಮಲ್ಲಪ್ಪ ,ಗುರುಪ್ಪ ಮತ್ತು ಸಣ್ಣಕರಿಯಪ್ಪನ ಮನೆ , ಪಶ್ಚಿಮಕ್ಕೆ - ನನಗೆ ಸೇರಿದ ಮನೆ , ಉತ್ತರಕ್ಕೆ ಸಣ್ಣಕರಿಯಪ್ಪನ ಮನೆ , ದಕ್ಷಿಣಕ್ಕೆ ಗುರಪ್ಪನ ಮನೆ. ನಿಪಿ 10 ರಲ್ಲಿರುವ ಮನೆಯು ನಾಡಹೆಂಚಿನ ಮನೆ ಅದರಲ್ಲಿ ಯಾರು ವಾಸ ಮಾಡುತ್ತಿರುವುದಿಲ್ಲ ಅದು ಬಿದ್ದು ಹೋಗಿರುತ್ತದೆ. ದಾವೆ ಹಾಕುವ ಕಾಲಕ್ಕೆ ಸದರಿ ಆಸ್ತಿಯ ವಿಸ್ತೀರ್ಣ್ಣವನ್ನು ಹೇಳಿ ಬರೆಯಿಸಿರುತ್ತೇವೆ. ನಿಪಿ 10 ನ್ನು ನಾನು ಪಂಚಾಯ್ತಿಯಲ್ಲಿ ಸೃಷ್ಟಿಸಿ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 10 ರಲ್ಲಿರುವ ದಾಖಲಾತಿಯು 2024-25 ನೇ ಸಾಲಿನದಾಗಿದ್ದು ಇದಕ್ಕೂ ಹಳೇಯ ವರ್ಷಗಳ ದಾಖಲಾತಿಗಳು ನನ್ನ ಬಳಿ ಇರುತ್ತದೆ. ನಿಪಿ 10 ನ್ನು 06 ವರ್ಷಗಳ ಹಿಂದೆ ಪಡೆದಿರುತ್ತೇನೆ. ಕೇಸು ಹಾಕುವ ಮೊದಲೇ ನಿಪಿ 10 ದಾಖಲೆಯನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಯನ್ನು ದಾವಾ ಹಾಕುವ ಕಾಲಕ್ಕೆ ಹಾಕಲು ನನಗೆ ಯಾವುದೇ ತೊಂದರೆ ಇರಲಿಲ್ಲ. 5ನೇ ದಾವಾ ಸ್ವತ್ತಿಗೆ ಪೂರಕವಾಗಿ ನಿಪಿ 10 ನ್ನು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**